# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **529** |
| ಸದಸ್ಯರು ಹೆಸರು | : | **ಶ್ರೀ ಶಿವಣ್ಣ ಬಿ.ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸಬೇಕಾದ ದಿನಾಂಕ | : | **20.08.2026** |
| ಉತ್ತರಿಸುವ ಸಚಿವರು | : | **ಗೃಹ ಸಚಿವರು.** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದ ಪ್ರಮುಖ ನಗರಗಳಲ್ಲಿ ಮತ್ತು ಕೈಗಾರಿಕಾ ವಲಯಗಳಲ್ಲಿ ತಡರಾತ್ರಿ ಕೆಲಸ ಮುಗಿಸಿ ಹಿಂತಿರುಗುವ ಹಾಗೂ ಸಂಚರಿಸುವ ಮಹಿಳೆಯರಿಗೆ ಸೂಕ್ತ ಭದ್ರತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿ ಸಿಸಿಟಿವಿ ಕ್ಯಾಮೆರಾಗಳು ಮತ್ತು 'ನಮ್ಮ 112' ಪೊಲೀಸ್ ಗಸ್ತು ವಾಹನಗಳು ಕಾರ್ಯಚರಿಸುತ್ತಿದ್ದರೂ ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಮೇಲಿನ ಬೀದಿ ಕಿರುಕುಳ ಮತ್ತು ದೌರ್ಜನ್ಯ ಪ್ರಕರಣಗಳು ಸಂಪೂರ್ಣ ನಿಯಂತ್ರಣಕ್ಕೆ ಬರದಿರಲು ಕಾರಣಗಳೇನು; | ರಾಜ್ಯದ ನಗರದ ಪೊಲೀಸ್ ಠಾಣಾ ಮಟ್ಟದಲ್ಲಿ ಚೀತಾ, ಹೊಯ್ಸಳ ವಾಹನಗಳು, ರಾತ್ರಿ ಗಸ್ತು ಅಧಿಕಾರಿಗಳು ಠಾಣಾ ಸರ ಹದ್ದಿನಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದು, ಇದರೊಂದಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಗೃಹ ಇಲಾಖೆಯ ಸಂಯೋಗದೊಂದಿಗೆ "ಅಕ್ಕ ಪಡೆ"ಯನ್ನು ರಾಜ್ಯದ 05 ಕಮಿಷನರೇಟ್ ಮತ್ತು 31 ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದು, ಬೆಂಗಳೂರು ನಗರದಲ್ಲಿ ರಾಣಿ ಚೆನ್ನಮ್ಮ ಪಡೆಯನ್ನು ಸ್ಥಾಪಿಸಲಾಗಿದೆ.<br><br>ರಾಜ್ಯದಲ್ಲಿ ತಡರಾತ್ರಿ ಕೆಲಸ ಮುಗಿಸಿ ಹಿಂತಿರುಗುವ ಹಾಗೂ ಸಂಚರಿಸುವ ಮಹಿಳೆಯರಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ರೀತಿಯ ಮುನ್ನೆಚರಿಕೆ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ.<br><br>ರಾಜ್ಯದಲ್ಲಿ ಸಿಸಿಟಿವಿ ಕ್ಯಾಮೆರಾಗಳು ಮತ್ತು 'ನಮ್ಮ 112' ಪೊಲೀಸ್ ಗಸ್ತುವಾಹನಗಳು ಕಾರ್ಯಚರಿಸುತ್ತಿದ್ದು, ಮಹಿಳೆಯರ ಮತ್ತು ಅಪ್ರಾಪ್ತರ ರಕ್ಷಣೆ ಮತ್ತು ಸುರಕ್ಷತೆಗಾಗಿ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದರಿಂದ ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಮೇಲಿನ ಬೀದಿ ಕಿರುಕುಳ ಮತ್ತು ದೌರ್ಜನ್ಯ ಪ್ರಕರಣಗಳು ಕ್ರಮೇಣ ಇಳಿಮುಖವಾಗಿರುವುದು ಗಮನಕ್ಕೆ ಬಂದಿದೆ. |

| | | |
|---|---|---|
| ಆ) | ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ವರದಿಯಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಮಹಿಳೆಯರ ಹಾಗೂ ಅಪ್ರಾಪ್ತರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿರುವುದು ನಿಜವೇ; ರಾಜ್ಯದ ಗೃಹ ಇಲಾಖೆಯು ಬೀದಿ ಕಾಮಣ್ಣರು ಮತ್ತು ಅಪರಾಧಿಗಳಲ್ಲಿ ನಡುಕ ಹುಟ್ಟಿಸಲು ಮಹಿಳಾ ಪೊಲೀಸರ ಮೂಲಕ 'ಡಿಕಾಯ್ ಕಾರ್ಯಚರಣೆಗಳನ್ನು (Decoy Operations/ರಹಸ್ಯಕಾರ್ಯಚರಣೆ) ನಿರಂತರವಾಗಿ ನಡೆಸುವ ಯಾವುದೇ ವಿಶೇಷ 'ಟಾಸ್ಕ್ ಫೋರ್ಸ್' ಅಥವಾ ಯೋಜನೆಗಳನ್ನು ಹಮ್ಮಿಕೊಂಡಿದೆಯೇ; (ಸಂಪೂರ್ಣ ವಿವರ ನೀಡುವುದು) | ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ **(NCRB) 2024**ನೇ ಸಾಲಿನಲ್ಲಿ ಅಪರಾಧ ಅಂಕಿ ಅಂಶಗಳ ಪ್ರಕಾರ ಕರ್ನಾಟಕ ರಾಜ್ಯವು ಮಹಿಳೆಯರ ಮೇಲಿನ ಕ್ರೈಂ ರೇಟ್‌ನಲ್ಲಿ 10ನೇ ಸ್ಥಾನ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕ್ರೈಂ ರೇಟ್‌ನಲ್ಲಿ 11ನೇ ಸ್ಥಾನದಲ್ಲಿದೆ.<br><br>ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ **(NCRB) 2024**ನೇ ಸಾಲಿನಲ್ಲಿ ಅಪರಾಧ ಅಂಕಿ ಅಂಶಗಳ ಪ್ರಕಾರ ದೇಶದ ಮೆಟ್ರೋ ಪಾಲಿಟನ್ ಬೆಂಗಳೂರು ನಗರವು 08 ನೇ ಸ್ಥಾನದಲ್ಲಿದೆ.<br><br>• ದುಡಿಯುವ ಮಹಿಳೆಯರ ಸುರಕ್ಷತೆಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ರಹಸ್ಯ/ಡಿಕಾಯ್ ಕಾರ್ಯಾಚರಣೆಗಳನ್ನು (Decoy Operations) ನಡೆಸಲಾಗುತ್ತಿದೆ.<br><br>• ರಾಜ್ಯದಲ್ಲಿ ಮಹಿಳೆಯರ ಮತ್ತು ಅಪ್ರಾಪ್ತರ ರಕ್ಷಣೆ ಮತ್ತು ಸುರಕ್ಷತೆಗಾಗಿ "ಅಕ್ಕಾ ಪಡೆ" ಮತ್ತು ಬೆಂಗಳೂರು ನಗರದಲ್ಲಿ ರಾಣಿ ಚನ್ನಮ ಪಡೆಯನ್ನು ಸ್ಥಾಪಿಸಲಾಗಿದೆ.<br><br>• ತುರ್ತು ಕರೆ 112, ಐ ಲ್ಯಾಂಡ್ಸ್‌ಳು ಇತ್ಯಾದಿಗಳನ್ನು ಸ್ಥಾಪಿಸಿ ಮಹಿಳೆಯರು ಆಪತ್ತಿನಲ್ಲಿರುವ ಸಂದರ್ಭದಲ್ಲಿ ಮಾಹಿತಿ ಬಂದ ಕೂಡಲೇ ಕ್ರಮ ಕೈಗೊಳ್ಳುವ ವ್ಯವಸ್ಥೆ ಜಾರಿಯಲ್ಲಿರುತ್ತದೆ.<br><br>• ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಕತ್ತಲು ಪ್ರದೇಶಗಳನ್ನು ಗುರುತಿಸಿ ಅಂತಹ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಹಾಗೂ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು. |

| | | |
|---|---|---|
| ಇ) | 'ಸುರಕ್ಷಿತ ನಗರ ಯೋಜನೆ' (Safe City Project) 'ನಿರ್ಭಯಾನಿಧಿ' ಅಡಿಯಲ್ಲಿ ಗ್ರೇಟರ್ ಬೆಂಗಳೂರು ಹಾಗೂ ರಾಜ್ಯದ ಇತರ ಮಹಾನಗರಗಳಲ್ಲಿ ಕೋಟ್ಯಂತರ ರೂಪಾಯಿ ಅನುದಾನ ಲಭ್ಯವಿದ್ದರೂ ನಗರಗಳ ಕತ್ತಲೆ ಪ್ರದೇಶಗಳಲ್ಲಿ (Dark Spots) ಬೀದಿ ದೀಪಗಳ ಕೊರತೆ ಮತ್ತು ಎಐ (AI) ಆಧಾರಿತ ಸಿಸಿ ಟಿವಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿರಲು ಕಾರಣಗಳೇನು; | ರಾಜ್ಯದ ನಗರಗಳಲ್ಲಿ ಕತ್ತಲೆ ಪ್ರದೇಶಗಳನ್ನು **(Dark Spots)** ಗುರುತಿಸಿ ಸಿಸಿಟಿವಿ ಹಾಗೂ ದೀಪಗಳನ್ನು ಅಳವಡಿಸಲಾಗಿದೆ. ವಿವರವು ಈ ಕೆಳಗಿನಂತಿದೆ.<br><br>• ನಿರ್ಭಯ ನಿಧಿ ಅನುದಾನದಡಿಯಲ್ಲಿ 'ಸುರಕ್ಷಿತ ನಗರ ಯೋಜನೆ' **(Safe City Project)** ಬೆಂಗಳೂರು ನಗರದ ಆಯುಕ್ತರ ಘಟಕದಿಂದ **8976** ಸಂಖ್ಯೆಯ ಸಿಸಿಟಿವಿಗಳನ್ನು ನಗರದಾದ್ಯಂತ **ಅಳವಡಿಸಲಾಗಿದ್ದು, 5550** ಎಐ **(AI)** ತಂತ್ರಾಂಶ ಪರವಾನಿಗಿ **(LICENCED)** ಹೊಂದಿದ್ದು, ಅವಶ್ಯಕತೆಗೆ ತಕ್ಕಂತೆ ಆಯಾ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಳ್ಳಲಾಗುವುದು. ಎಲ್ಲಾ ಸಿಸಿಟಿವಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳ ನಿರ್ವಹಣೆ ಮತ್ತು ನಿಗಾ ಕಾರ್ಯಾವನ್ನು ಸೇಫ್ ಸಿಟಿ ಕಮಾಂಡ್ ಸೆಂಟರ್‌ನಿಂದ ನಿರ್ವಹಿಸಲಾಗುತ್ತಿದೆ. |
| ಈ) | ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳಡಿ ಬಿಡುಗಡೆಯಾದ ಬಳಕೆಯಾದ ಹಾಗೂ ಬಳಕೆಯಾಗದೆ ಬಾಕಿ ಉಳಿದಿರುವ ಯೋಜನೆವಾರು ಅನುದಾನದ ವಿವರವೇನು; | ನಿರ್ಭಯ ನಿಧಿಯ ಸೇಫ್‌ಸಿಟಿ ಯೋಜನೆ ಅಡಿಯಲ್ಲಿ ಕಳೆದ ಮೂರು ವರ್ಷ ಗಳಲ್ಲಿ ಬಿಡುಗಡೆಯಾದ, ಬಳಕೆಯಾದ ಹಾಗೂ ಉಳಿಕೆ ಮೊತ್ತದ ವಿವರಗಳು **ಅನುಬಂಧ - ಎ** ರಲ್ಲಿ ಒದಗಿಸಲಾಗಿದೆ. |
| ಉ) | ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಕಾನೂನು ಪ್ರಕ್ರಿಯೆ ಮತ್ತು ಶಿಕ್ಷೆ ವಿಳಂಬವಾಗುವುದನ್ನು ತಡೆಯಲು ಗೃಹ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ 60 ದಿನಗಳ ಒಳಗಾಗಿ ದೋಷಾರೋಪಣೆ ಪಟ್ಟಿ (Charge Sheet) ಸಲ್ಲಿಕೆ, ದ್ರುತಗತಿ ನ್ಯಾಯಾಲಯಗಳ (Fast Track Courts) ಬಲವರ್ಧನೆ ಹಾಗೂ ದುಡಿಯುವ ಮಹಿಳೆಯರಿಗಾಗಿ 'ಸುರಕ್ಷಾ ಆ್ಯಪ್' ಮತ್ತು ಕೆಲಸದ ಸ್ಥಳಗಳಲ್ಲಿ ಆಂತರಿಕ ದೂರು ಸಮಿತಿ (ICC) ಜಾರಿಯನ್ನು ಕಡ್ಡಾಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಶೀಘ್ರ ವಿಲೇವಾರಿಗೆ ಈ ಕೆಳಗಿನಂತೆ ಕ್ರಮ ಕೈಗೊಂಡಿದೆ.<br><br>• ಮಹಿಳೆಯರ ಮೇಲಿನ ಅಪರಾಧಗಳಾದ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಪ್ರಕರಣಗಳನ್ನು ಹಿರಿಯ ಅಧಿಕಾರಿಗಳು ನಿಯಮಿತವಾಗಿ ಪರಿಶೀಲನೆಯೊಂದಿಗೆ ತನಿಖೆಯನ್ನು ನಿಯಮಾನುಸಾರ ಕ್ರಮಬದ್ಧವಾಗಿ ನಿರ್ವಹಿಸಿ 60 ದಿನಗಳೊಳಗೆ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗುತ್ತಿದೆ. |

- ಜಿಲ್ಲಾ ಪೊಲೀಸ್ ಘಟಕಗಳು/ ಕಮೀಷನರೇಟ್‌ಗಳಿಗೆ ಅತ್ಯಾಧುನಿಕ Mobile Forensic Vansಗಳನ್ನು ಒದಗಿಸಲಾಗಿದ್ದು, ಇವುಗಳ ಮೂಲಕ ಅಪರಾಧ ಸ್ಥಳದಲ್ಲಿಯೇ ವೈಜ್ಞಾನಿಕ ಹಾಗೂ ಡಿಜಿಟಲ್ ಸಾಕ್ಷ್ಯಗಳ ಸಂಗ್ರಹಣೆ ನಡೆಸಲಾಗುತ್ತಿದೆ.

- ಪ್ರಕರಣದ ಸಾಕ್ಷಿಗಳು ಯಾವುದೇ ಬೆದರಿಕೆಗಳಿಗೆ ಹೆದರದೆ, ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ಸಾಕ್ಷ್ಯ ಹೇಳಲು ಪ್ರೋತ್ಸಾಹಿಸಲಾಗುತ್ತದೆ.

- ವಿಚಾರಣಾ ಹಂತದಲ್ಲಿರುವ ಇಂತಹ ಗಂಭೀರ ಪ್ರಕರಣಗಳನ್ನು ಪಿಐ, ಎಸಿಪಿ ದರ್ಜೆಯ ಅಧಿಕಾರಿಗಳು ಖುದ್ದಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಶಿಕ್ಷೆಯಾಗುವಂತೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

- ರಾಜ್ಯಾದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ Women Help Desk ಗಳನ್ನು ಸ್ಥಾಪಿಸಲಾಗಿದೆ.

- ನ್ಯೂ ಕ್ರಿಮಿನಲ್ ಲಾ ಅಡಿಯಲ್ಲಿ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನ 60 ದಿನಗಳೊಳಗೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗುತ್ತಿದೆ ಹಾಗೂ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿರುತ್ತದೆ.

ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ **Fast Track Courts** ಕಾರ್ಯನಿರ್ವಹಿಸುತ್ತಿದೆ.

| | | |
|---|---|---|
| | | ಪೋಕ್ಸೋ ಕಾಯ್ದೆಯಡಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದೆ.<br><br>ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಈ ಕೆಳಕಂಡ ಕ್ರಮವನ್ನು ಕೈಗೊಂಡಿದೆ.<br><br>• ಮಹಿಳೆಯರು ತಮ್ಮ ಕೆಲಸದ ಸ್ಥಳಗಳು ಅಥವಾ ಕಚೇರಿಗಳಲ್ಲಿ ಘನತೆಯಿಂದ ಕರ್ತವ್ಯ ನಿರ್ವಹಿಸಲು ಪೂರಕವಾದ ವಾತಾವರಣ ಕಲ್ಪಿಸಲಾಗುತ್ತಿದೆ.<br>• ಇದಲ್ಲದೆ, 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ, 2013'ರ ಅಡಿಯಲ್ಲಿ 'PoSH' ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿದೆ. ಕಚೇರಿಗಳು ಅಥವಾ ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ಕೆಲಸದ ವಾತಾವರಣವನ್ನು ಖಾತ್ರಿ ಪಡಿಸುವುದು ಮತ್ತು ಲೈಂಗಿಕ ಕಿರುಕುಳದ ದೂರುಗಳ ಕುರಿತು ಗೌಪ್ಯ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು ಈ ಸಮಿತಿಯ ಪ್ರಮುಖ ಉದ್ದೇಶವಾಗಿದೆ ವಿಶೇಷ ಮಕ್ಕಳ ಘಟಕಗಳನ್ನು ಸ್ಥಾಪಿಸಿರುತ್ತದೆ. |

**ಹೆಚ್‌ಡಿ 473 ಎಸ್‌ಎಸ್‌ಟಿ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು.

<u>**ಅನುಬಂಧ-ಎ**</u>

ನಿರ್ಭಯ ನಿಧಿಯ  ಸೇಫ್ ಸಿಟಿ ಯೋಜನೆ ಅಡಿಯಲ್ಲಿ ಕಳೆದ ಮೂರು ವರ್ಷ ಗಳಲ್ಲಿ
ಬಿಡುಗಡೆಯಾದ, ಬಳಕೆಯಾದ ಹಾಗೂ ಉಳಿಕೆ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

<table>
<tr><th rowspan="3">Release order Date</th><th rowspan="3">Installment</th><th colspan="3">Funds Received</th><th colspan="2">Expenditure</th><th>Remaining Balance</th></tr>
<tr><th>Central Share</th><th>State Share</th><th rowspan="2">Total<br>(In Cr.)</th><th colspan="2" rowspan="2">In (Cr)</th><td rowspan="7">ಉಳಿಕೆ ಮೊತ್ತ ಒಟ್ಟು 160.44/- ಕೋಟಿ ಮುಂದಿನ ಮೂರುವರೆ ವರ್ಷಗಳ (31-ಡಿಸೆಂಬರ್-2029 ರವರೆಗೆ) ನಿರ್ವಹಣೆಗಾಗಿ ಕಾಯ್ದಿರಿಸಲಾಗಿದೆ</td></tr>
<tr><th>(In Cr.)</th><th>(In Cr.)</th></tr>
<tr><td>01-01-2024</td><td>3rd Installment</td><td>100.05</td><td>66.7</td><td>166.75</td><td>2023-24</td><td>101.53</td></tr>
<tr><td>29-03-2025</td><td>4th Installment</td><td>25.00</td><td>16.48</td><td>41.48</td><td>2024-25</td><td>113.51</td></tr>
<tr><td>15-05-2025</td><td>5th Installment</td><td>38.35</td><td>25.57</td><td>63.92</td><td>2025-26</td><td>56.7</td></tr>
<tr><td>25-03-2026</td><td>6th Installment</td><td>10.79</td><td>7.39</td><td>18.18</td><td>2026-27</td><td>8.85</td></tr>
<tr><td colspan="2">Total</td><td>174.19</td><td>116.14</td><td>290.33</td><td>Total</td><td>280.59</td></tr>
</table>